International Journal of Kannada Research 2025; 11(4): 19-24

International Journal of Kannada Research
www.kannadajournal.com

ISSN: 2454–5813
IJKR 2025; 11(4): 19-24
© 2025 IJKR
www.kannadajournal.com
Received: 20-08-2025
Accepted: 25-09-2025

**ಪ್ರಿಯಾಂಕ ಅರೆಮನೆ**
ಕನ್ನಡ ಅಧ್ಯಯನ ವಿಭಾಗ
ಬೆಂಗಳೂರು ನಗರ
ವಿಶ್ವವಿದ್ಯಾಲಯ ಜ್ಞಾನಜ್ಯೋತಿ
ಆವರಣ, ಅರಮನೆ ರಸ್ತೆ,
ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಪ್ರಿಯಾಂಕ ಅರೆಮನೆ**
ಕನ್ನಡ ಅಧ್ಯಯನ ವಿಭಾಗ
ಬೆಂಗಳೂರು ನಗರ
ವಿಶ್ವವಿದ್ಯಾಲಯ ಜ್ಞಾನಜ್ಯೋತಿ
ಆವರಣ, ಅರಮನೆ ರಸ್ತೆ,
ಬೆಂಗಳೂರು, ಕರ್ನಾಟಕ, ಭಾರತ

# ಯು.ಆರ್. ಅನಂತಮೂರ್ತಿ ಅವರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ ಹಾಗೂ ಮನೋವೈಜ್ಞಾನಿಕತೆಯ ನೆಲೆಗಳು

**ಪ್ರಿಯಾಂಕ ಅರೆಮನೆ**

**DOI:** https://www.doi.org/10.22271/24545813.2025.v11.i4a.1175

**ಪೀಠಿಕೆ**

ಪರಂಪರೆಯೆಂದರೆ ಸಾಂಪ್ರದಾಯಿಕವಾದುದು. ಒಂದು ಪರಿಸರದ ಹಾಗೂ ಸಮುದಾಯದ ಭೂತದ ಮುಂದುವರಿಕೆ. ಒಂದು ಕಾಲದ ವ್ಯವಸ್ಥಿತ ಜೀವನಕ್ರಮವೊಂದರ ಅವಿಭಾಜ್ಯ ಅಂಗವಾಗಿ ಪೂರ್ವಜರಿಂದ ಹಾಗೂ ಒಂದು ಜನಾಂಗದ ತಲೆಮಾರು ಸಾಮೂಹಿಕವಾಗಿ ಉಳಿಸಿಕೊಂಡು ಬಂದ ಜೀವನಪದ್ದತಿ, ನಂಬಿಕೆ, ವಿಧಿವಿಧಾನ, ಸಂಪ್ರದಾಯ, ಆಚರಣೆಗಳ ಮೊತ್ತವೇ ಪರಂಪರೆ. ಒಂದು ಸಮುದಾಯದ ಪರಂಪರೆ ಭೂತದಿಂದ ವರ್ತಮಾನಕ್ಕೆ ಹರಿದುಬರುವಾಗ ಸಂಪ್ರದಾಯಿಕ ದೃಷ್ಟಿಕೋನ ಉಳಿಸಿಕೊಳ್ಳುವ ಆಶಯವಿದ್ದರೂ ಪರಿವರ್ತನೆಯು ನಿರಂತರವಾದುದು. ಈ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಪರಂಪರೆ ಕಾಣಿಸಿಕೊಳ್ಳುವ ಬಗೆ ವಿಭಿನ್ನವಾದುದು. ಪರಂಪರೆಯನ್ನು ಕುರುಡಾಗಿ ಅನುಸರಿಸದೇ, ಗತಕಾಲದ ಅರಿವಿನೊಡನೆ ಆ ಸ್ಮೃತಿಗಳನ್ನು ಮರು ಮೆಲುಕುಹಾಕುವ ವಾಸ್ತವದೊಂದಿಗೆ ಸಮೀಕರಿಸುವ ನೋಟಕ್ರಮವಿದೆ. ಈ ದೃಷ್ಟಿಯಿಂದ ಕಾಲ ಮತ್ತು ದೇಶದ ಆವರಣದಲ್ಲಿ ಯುಗಧರ್ಮಗಳಿಗೆ ತಕ್ಕಂತೆ ಹಳೆಯದರ ತುದಿಯಿಂದ ಹೊಸತು ರೂಪುಗೊಳ್ಳುವುದೆ ಆಧುನಿಕತೆ ಎನ್ನಬಹುದು.

ಭಾರತೀಯ ಸಮಾಜದಲ್ಲಿ ಆಧುನಿಕತೆ ಎಂಬ ಪರಿಕಲ್ಪನೆಯು ಅನ್ಯಸಂಸ್ಕೃತಿಯ ಪ್ರವೇಶದ ಸಂದರ್ಭದಲ್ಲಿ ಮುನ್ನೆಲೆಗೆ ಬಂದಿತು. ವಸಾಹತೀಕರಣಕ್ಕೊಳಗಾದ ಸಾಮಾಜಿಕ ಪರಿಸರವೂ ಆಧುನಿಕತೆ ಪ್ರಚುರಪಡಿಸುವ ಸಾಂಕೇತಿಕ ರೂಪಗಳಾಗಿದ್ದವು. ಹೊರಗಿನ ಸಂಪರ್ಕ, ಒಳಗಿನ ಒತ್ತಡದಿಂದ ಆಧುನಿಕತೆಯ ಪ್ರವೇಶವಾಗುತ್ತದೆ. ಹೊಸ ಸಂಸ್ಕೃತಿಯ ಸ್ವೀಕರಿಸಬೇಕೆಂಬ ಗೊಂದಲ ಮತ್ತು ನಿರಾಕರಣೆಯು ಪರಂಪರೆ ಮತ್ತು ಆಧುನಿಕತೆಯ ನಡುವಿನ ಸಂಘರ್ಷದ ಭಾಗವಾಗಿದೆ. ಪರಂಪರೆಯಿಂದ ಸಂಪೂರ್ಣವಾಗಿ ವಿಮುಖಗೊಳ್ಳಲಾಗದೆ ಆಧುನಿಕತೆಯ ಮುಖಾಮುಖಿಯಿಂದ ಒಂದು ಪರಿಸರ ತನ್ನದೇ ಚೌಕಟ್ಟಿನೊಳಗಡೆ ಹೊಸತನವನ್ನು ತಳೆಯುತ್ತದೆ. ಇದು ಸ್ವೀಕಾರ, ನಿರಾಕರಣೆ, ಸ್ಥಿತ್ಯಂತರ, ಸಂಘರ್ಷ ಈ ಪ್ರಕ್ರಿಯೆಗಳೊಂದಿಗೆ ರೂಪಾಂತರಗೊಳ್ಳುವುದನ್ನು ಕನ್ನಡದ ಸಾಹಿತ್ಯಕೃತಿಗಳಲ್ಲಿ ಕಾಣಬಹುದು. ಕನ್ನಡದ ಆರಂಭದ ಕಾದಂಬರಿಕಾರರಾದ ಗುಲ್ವಾಡಿ ವೆಂಕಟರಾಯ, ಕೆರೂರು ವಾಸುದೇವಾಚಾರ್ಯ, ಎಂ.ಎಸ್. ಪುಟ್ಟಣ್ಣ, ನವೋದಯ ಕಾಲಘಟ್ಟದ ಬಿ.ಎಂ.ಶ್ರೀ, ಪಂಜೆ ಮಂಗೇಶರಾಯರು, ಕುವೆಂಪು, ಕಾರಂತರ ಕೃತಿಗಳಲ್ಲಿ ಪೂರ್ವ– ಪಶ್ಚಿಮದ ಮುಖಾಮುಖಿಯ ದೃಷ್ಟಿಯಿಂದ ಪರಂಪರೆ ಮತ್ತು ಆಧುನಿಕತೆಯ ವಿಚಾರಗಳು ಅಭಿವ್ಯಕ್ತಗೊಂಡಿವೆ. ನವ್ಯ ಕಾಲಘಟ್ಟದ ಗೋಪಾಲಕೃಷ್ಣ ಅಡಿಗರು, ಲಂಕೇಶ್, ಯು. ಆರ್. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ ಮುಂತಾದವರ ಸಾಹಿತ್ಯಕೃತಿಗಳಲ್ಲಿ ಈ ವಿಚಾರಗಳು ಒಡಮೂಡಿದ ಬಗೆಗೂ ಮೂಲಭೂತ ವ್ಯತ್ಯಾಸಗಳಿವೆ. ಪಾಶ್ಚಾತ್ಯ ಶಿಕ್ಷಣ, ಗಾಂಧೀವಾದ, ಅಂಬೇಡ್ಕರ್‌ವಾದ, ಸಮಾಜವಾದ, ಲೋಹಿಯಾವಾದ, ಜಾಗತೀಕರಣ ಈ ಪರಿಕಲ್ಪನೆಯಲ್ಲಿ ಜೊತೆಗೆ ಮನೋವೈಜ್ಞಾನಿಕವಾದ, ಅಸ್ತಿತ್ವವಾದ, ವ್ಯಕ್ತಿ ವಿಶಿಷ್ಟಸಿದ್ದಾಂತ ಈ ವಿಚಾರಧಾರೆಗಳ ಅಡಿಯಲ್ಲಿ ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯ ಚಿತ್ರಣವಿದೆ.

ಯು. ಆರ್. ಅನಂತಮೂರ್ತಿಯವರು ಕನ್ನಡದ ನವ್ಯ ಸಾಹಿತ್ಯ ಕಾಲಘಟ್ಟದ ಪ್ರಮುಖ ಲೇಖಕರರಲ್ಲಿ ಒಬ್ಬರು. ತಮ್ಮ ವೈಚಾರಿಕ ಚಿಂತನೆಗಳ ಮೂಲಕ ಭಾರತೀಯ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಮತ್ತು ವಿಮರ್ಶಾ ಕ್ಷೇತ್ರವನ್ನು ಶ್ರೀಮಂತಗೊಳಿಸಿದವರು. ಅನಂತಮೂರ್ತಿಯವರು ಪಾಶ್ಚಾತ್ಯ ಪ್ರೇರಣೆಗಳನ್ನು ಸ್ವಾಗತಿಸುತ್ತಾ, ಭಾರತೀಯ ಸಂಸ್ಕೃತಿಯನ್ನು ಗಂಭೀರವಾಗಿ ಚಿಂತಿಸಿ ಸಾಹಿತ್ಯ ರೂಪಿಸಿದವರು. ಭಾರತೀಯ ಸಂಸ್ಕೃತಿ, ಸನಾತನ ಧರ್ಮ ಮತ್ತು ಸಂಪ್ರದಾಯಗಳ ಒಳಹೊರಗುಗಳ ಕುರಿತಾಗಿ ಆಳವಾದ ವಿಶ್ಲೇಷಣೆ ಮಾಡಿದ್ದಾರೆ.

'ಪ್ರಜ್ಞೆ ಮತ್ತು ಪರಿಸರ' 'ಪೂರ್ವಾಪರ' ಈ ವೈಚಾರಿಕ ಕೃತಿಗಳ ಮೂಲಕ ಪಾಶ್ಚಾತ್ಯ ಚಿಂತನೆ, ಪರಂಪರೆ, ಆಧುನಿಕತೆ, ಸಂಸ್ಕೃತಿ, ಸಂಪ್ರದಾಯ, ಜಾತಿವ್ಯವಸ್ಥೆ, ಮೂಢನಂಬಿಕೆಗಳ ಕುರಿತಾಗಿ ತಮ್ಮ ಚಿಂತನೆಗಳನ್ನು ತೀಕ್ಷ್ಣವಾದ ವಿಮರ್ಶೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಅನಂತಮೂರ್ತಿಯವರ 'ಸಂಸ್ಕಾರ' 'ಭಾರತೀಪುರ' ಕಾದಂಬರಿಗಳು ಇಂತಹ ಹಲವು ಆಯಾಮಗಳನ್ನು ತೆರೆದಿಡುತ್ತವೆ. ಪಾಶ್ಚಾತ್ಯ ಪ್ರಭಾವಗಳನ್ನು ಸ್ವೀಕರಿಸುವಾಗ ಮತ್ತು ಆಧುನಿಕತೆ ಮತ್ತು ಸಂಪ್ರದಾಯದ ನಡುವೆ ಸಮತೋಲನ ಸಾಧಿಸುವಾಗ ಎದುರಾಗುವ ಸಂಘರ್ಷಗಳನ್ನು ಮುಖಾಮುಖಿಯಾಗಿಸಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿ ಮುಖಾಮುಖಿಯಾದಾಗ ಆದಂತಹ ಸಂಘರ್ಷ, ಪರಂಪರಾಗತ ಮೌಲ್ಯಗಳನ್ನು ಶೋಧಿಸಬೇಕೆಂಬ ಉದ್ದೇಶದಿಂದಲೇ ಬರವಣಿಗೆಯ ತಂತ್ರವಾಗಿ ಮಲೆನಾಡಿನ ಹಳ್ಳಿಯ ಪರಿಸರವನ್ನು ಕಥನ ಕೇಂದ್ರವಾಗಿ ಬಳಸುವರು. ಪರಂಪರಾಗತ, ಆಧುನಿಕತೆಯ ಮೌಲ್ಯಗಳನ್ನು ವೈಯುಕ್ತಿಕ ಸಾಮಾಜಿಕ ನೆಲೆಯಲ್ಲಿಟ್ಟುಕೊಂಡು ಕಥನಗಳನ್ನು ರೂಪಿಸಿದರು. 'ಭಾರತೀಪುರ' ಕಾದಂಬರಿಯ ಜಗನ್ನಾಥ 'ಸೂರ್ಯನ ಕುದುರೆ' ಕಥೆಯ ಅನಂತು ಈ ಬಗೆಯ ಗೊಂದಲಗಳಿಗೆ ಸಿಕ್ಕು ಮಾನಸಿಕ ತೊಳಲಾಟಗಳಿಗೆ ಒಳಗಾಗುವರು.

ಅನಂತಮೂರ್ತಿ ಅವರ ಕಥೆಗಳಲ್ಲಿ ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಘರ್ಷ, ಮಾನವನ ಮೂಲಭೂತ ಬಯಕೆ ಮತ್ತು ನೈತಿಕತೆಯ ನಡುವಿನ ಹೋರಾಟ, ಆಧುನಿಕತೆಯ ಒತ್ತಡದೊಂದಿಗೆ ಬದುಕುತ್ತಿರುವ ಸಾಮಾನ್ಯ ಮನುಷ್ಯನ ದ್ವಂದ್ವ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಹಿನ್ನಲೆಯಲ್ಲಿ 'ಸೂರ್ಯನ ಕುದುರೆ' ಹಾಗೂ 'ಪ್ರಕೃತಿ' ಕಥೆಗಳ ಕಥಾಶೈಲಿ, ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿ ಹಾಗೂ ಮನೋವೈಜ್ಞಾನಿಕ ನೆಲೆಗಳನ್ನು ಪರಾಮರ್ಶಿಸಬಹುದು.

**ಸೂರ್ಯನ ಕುದುರೆ' ಕತೆಯಲ್ಲಿ ಪರಂಪರೆ ಮತ್ತು ಆಧುನಿಕತೆ**

'ಸೂರ್ಯನ ಕುದುರೆ' ಕತೆಯಲ್ಲಿ ಪೂರ್ವ – ಪಶ್ಚಿಮ, ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯನ್ನು ವಿಭಿನ್ನ ಪಾತ್ರ ಮತ್ತು ಸಂಕೇತಗಳ ಮೂಲಕ ಮನಗಾಣಿಸುತ್ತಾರೆ. ಸೂರ್ಯನ ಕುದುರೆ ಎಂಬುದು ಆಸೆಯ ಸಂಕೇತ. ಕನಸುಗಳ ಪ್ರತೀಕ. ಮಾನವನ ಮನಸ್ಸಿನ ಚಂಚಲತೆಗಳನ್ನು ಪ್ರತಿಬಿಂಬಿಸುತ್ತದೆ. ಅನಂತುವಿನ ಒಳಮನಸ್ಸಿನ ತಲ್ಲಣಗಳು, ಅಂತರಂಗದ ಆಕಾಂಕ್ಷೆ ಹಾಗೂ ಹೊರಗಿನ ಸಮಾಜದ ಒತ್ತಡಗಳ ಮಧ್ಯೆ ಅನಂತುವಿನ ತಾಕಲಾಟ, ಸುಬ್ಬುವಿನ ಹೋರಾಟವನ್ನು ಮನೋವೈಜ್ಞಾನಿಕವಾಗಿ ತೋರಿಸುತ್ತಾರೆ.

ಈ ಕಥೆಯಲ್ಲಿ ಪ್ರಮುಖ ಪಾತ್ರ ಅನಂತು. ಇಂಗ್ಲೀಷ್ ಶಿಕ್ಷಣ ಪಡೆದು ವಿದೇಶದಲ್ಲಿ ಶಿಕ್ಷಣ ಮುಗಿಸಿ ಹಳ್ಳಿಗೆ ಹಿಂತಿರುಗಿದವನು. ಹಳ್ಳಿಯ ಹಿಂತಿರುಗಿದ ನಂತರ ಭಾರತೀಯ ಹಾಗೂ ಪಾಶ್ಚಾತ್ಯ ಎರಡೂ ಜೀವನಕ್ರಮಗಳ ವೈರುಧ್ಯಗಳನ್ನು ಗುರುತಿಸುವವನು. ಈ ಕತೆಯಲ್ಲಿ ಬರುವ ಇನ್ನೊಂದು ಪಾತ್ರ ಅನಂತುವಿನ ಬಾಲ್ಯದ ಗೆಳೆಯ ಹಡೆವೆಂಕಟ. ಇತನದು ಹಳ್ಳಿಗಮಾರನ ಪಾತ್ರ. ಆಧುನಿಕ ಶಿಕ್ಷಣ ಪಡೆದ ಅನಂತು ಸಮಾಜದ ಕಣ್ಣಲ್ಲಿ ದೊಡ್ಡ ವ್ಯಕ್ತಿ. ಇದೇ ಸಮಾಜದಲ್ಲಿ ವೆಂಕಟನು ಕುಂಕುಮ ತೊಟ್ಟು, ಕಮಾನು ಕ್ರಾಫು ಬಿಟ್ಟು ಬದುಕೆಂಬ ಯುದ್ದದಲ್ಲಿ ಹೆಣಗಾಡುತ್ತಿರುವ ಮಾಮೂಲಿ ಮನುಷ್ಯನಾಗಿ ಕಾಣುತ್ತಾನೆ. ಈ ಕತೆಯಲ್ಲಿ ಇನ್ನೊಂದು ಪ್ರಮುಖ ಪಾತ್ರವಿದೆ. ವೆಂಕಟ ಮಗ ಸುಬ್ಬುವಿನದು. ತಂದೆ ವೆಂಕಟನದು ಉಡಾಫೆಯ ಜಾಯಾಮಾನವಾಗಿದ್ದರೆ, ಈ ಬಗೆಯ ಮನಸ್ಥಿತಿಯನ್ನು ಒಪ್ಪಿಕೊಳ್ಳದ ಸುಬ್ಬುವಿನದೂ ಕ್ರಾಂತಿಕಾರಿ ಆಧುನಿಕ ಮನೋಭಾವ. ವೆಂಕಟ ಸಂಪ್ರದಾಯವನ್ನು ಪ್ರತಿನಿಧಿಸಿದರೆ ಮಗ ಸುಬ್ಬು ಆಧುನಿಕದ ಪ್ರತಿನಿಧಿಯಾಗಿದ್ದಾನೆ.

ವೆಂಕಟನ ಜೊಯ್ಸಿತನ ಪೌರೋಹಿತ್ಯ ವೃತ್ತಿಯಲ್ಲಿ ತೊಡಗಿದ್ದರೂ ಆತನ ಉಡಾಫೆಯ ಮನೋಭಾವ, ಪರೋಪಕಾರಿತನ ಇವುಗಳಿಂದ ಹಳ್ಳಿಯಲ್ಲಿ ಗೌರವ, ಮರ್ಯಾದೆಗಳು ಇರಲಿಲ್ಲ. ಅದು ಹಡೆವೆಂಕಟನಿಗೆ ಬೇಕಾಗಿಯೂ ಇರಲಿಲ್ಲ. ತಂದೆಗೆ ಹಳ್ಳಿಯ ಜನರು ನೀಡುತ್ತಿದ್ದ ಅವಮರ್ಯಾದೆಯಿಂದ ಮಗ ಸುಬ್ಬುವಿಗೂ, ಹೆಂಡತಿಗೂ, ಮಕ್ಕಳಿಗೂ ಮುಜುಗರವೇ ಆಗಿತ್ತು. ಹೆಂಡತಿ ರುಕ್ಕಮ್ಮ ಯೌವ್ವನಕ್ಕೆ ಬಂದ ತನ್ನ ಮೂವರ ಹೆಣ್ಣು ಮಕ್ಕಳೊಂದಿಗೆ ನೀರಸವಾದ ಬದುಕನ್ನು ಬದುಕಿ ಕಾಲ ಕಳೆಯುವಂತಾಗಿತ್ತು. ಅಪ್ಪನ ಬಗೆಗಿನ ಅಸಮಾಧಾನ ಸುಬ್ಬುವನ್ನು ನಗರದ ಬದುಕಿನೆಡೆಗೆ ಕರೆದೊಯ್ಯಿತು. ಆಧುನಿಕತೆಯ ಶೋಕಿ ಹಾಗೂ ದುಶ್ಚಟಗಳಿಗೆ ಮಾರು ಹೋಗಿ ವೆಂಕಟನ ಮಗ ಸುಬ್ರಹ್ಮಣ್ಯನ ವ್ಯಕ್ತಿತ್ವವೇ ಬದಲಾಯಿತು. ನಗರದ ಆಧುನಿಕ ಪರಿಸರ ವಾತಾವರಣಕ್ಕೆ ಮಾರು ಹೋಗಿ, ತಂದೆ ತಾಯಿಗೆ ಆತಂಕಕಾರಿಯಾಗಿ ಪರಿವರ್ತಿತನಾಗುವನು. ತಂದೆಗೆ ಎದುರು ಉತ್ತರ ಕೊಡುವಷ್ಟು ದೊಡ್ಡವನಾದನು. ತಂದೆಯನ್ನು ವಿರೋಧಿಸುವನು. ತಂದೆ ಹಣ ನೀಡದಿದ್ದಾಗ ದುಶ್ಚಟಗಳಿಗೆ ಬಲಿಯಾಗಿ ಮನೆಯಲ್ಲೇ ಕಳ್ಳತನ ಮಾಡಿ, ಇಡೀ ಕುಟುಂಬವನ್ನು ದ್ವೇಷಿಸಿವನು. ಮುಂದೆ ಈತ ಹೆತ್ತವರನ್ನೂ ಕೊಲ್ಲಲು ಮುಂದಾಗುವುದರ ಮೂಲಕ ದುಷ್ಕೃತ್ಯಗಳಲ್ಲಿ ತೊಡಗುವನು. ಸುಬ್ಬುವಿಗೆ ತಂದೆಯ ಉಡಾಫೆಯ ಮನೋಭಾವ, ಜೊಯ್ಸಿತನ, ಪರೋಪಕಾರಿತನ ಇವ್ಯಾವುದೂ ಬೇಕಾಗಿಲ್ಲ. ಆತನು ಆಧುನಿಕತೆ ಬಯಸುತ್ತಿದ್ದಾನೆ. ಅದನ್ನು ವಿರೋಧಿಸಿದವರು ಆತನ ಪಾಲಿಗೆ ವೈರಿಗಳು. ಇದರಿಂದಲೇ ದ್ವೇಷ, ಕ್ರೂರ ಮನೋಭಾವಗಳನ್ನು ಬೆಳೆಸಿಕೊಳ್ಳುವುದು ತೋರುತ್ತದೆ.

ಸುಬ್ಬುವಿನಲ್ಲಿ ತಂದೆ ವೆಂಕಟನ ಉದಾಸೀನ, ಉಡಾಫೆ ವ್ಯಕ್ತಿತ್ವ ತನ್ನ ಬದುಕಿನಲ್ಲಿಯೂ ಯಾವುದೇ ರೀತಿಯ ಛಲವಿಲ್ಲದಂತೆ ಬದುಕುವುದನ್ನು ಕಲಿಸಿತ್ತು. ತಮ್ಮ ಊರಿನವರೇ ತನ್ನ ತಂದೆಯನ್ನು ಹೀಯಾಳಿಸುವದು. ಆತನನ್ನು ಹಾಸ್ಯಗಾರನಂತೆ ಕಾಣುತ್ತಿದ್ದುದು ನೋವು ಹಾಗೂ ಆಕ್ರೋಶಕ್ಕೆ ಕಾರಣವಾಗಿತ್ತು. 'ತನ್ನ ಅಪ್ಪನಿಗೆ ಕಿಮ್ಮತ್ತಿಲ್ಲಾಂತ ಸುಬ್ಬು ಹಲ್ಲು ಹಲ್ಲು ಕಡೀತಾನೆ. ಆದರೆ ನನ್ನ ಜಾಯಮಾನ ಬದಲಾಗುತ್ತ? ಅವನ ಪ್ರಿನ್ಸಿಪಾಲರು ಹಾಜರಿ ಸಾಲದೂಂತ ಪರೀಕ್ಷೆಗೆ ಕೂರಿಸಲಿಲ್ಲವಂತೆ. ಅದ್ಕೆ ಇವ ರಾತ್ರಿ ಅಡ್ಡಕಟ್ಟಿ ಹೊಡೀಬೇಕ? ಅವರ ಜೇಬಲ್ಲಿದ್ದ ದುಡ್ಡನ್ನೂ ಕಿತ್ಕೊಂಡ ಅಂತಾರೆ. ಪೇಟೇಲಿ ಒಂದು ಹಿಟ್ಟಿನ ಗಿರಣಿ ತೆಗೀಬೇಕು ದುಡ್ಡು ಕೊಡು ಅಂತ ಪೀಡಿಸ್ತಾನೆ'೧ ಈ ರೀತಿ ಸುಬ್ಬುವೂ ಮನೆಯಲ್ಲಿ ಹಾಗೂ ಹೊರಗಿನ

[1] ಅನಂತಮೂರ್ತಿ ಯು. ಆರ್., ಅನಂತಮೂರ್ತಿ ಅವರ ಸಮಸ್ತ ಕಥೆಗಳು, ೨೦೧೫, ಪುಟ ಸಂಖ್ಯೆ ೪೦೦

ವಾತಾವರಣದಲ್ಲಿಯೂ ಸಿಟ್ಟು, ಹಠಮಾರಿಯ ಪ್ರವೃತ್ತಿ ಬೆಳೆಸಿಕೊಳ್ಳುವುದನ್ನು ನೋಡಬಹುದು.

ಈ ಕಥೆಯಲ್ಲಿ ಅನಂತು ವೆಂಕಟನಿಗೆ 'ನಿನ್ನ ಫಿಲಾಸಫಿಯ ಸೋಲು ನಿನ್ನ ಮಗನಲ್ಲಿ ಎದುರಾಗಿದೆ. ಮಗನನ್ನು ನಿಯಂತ್ರಿಸಲು ಸಾಧ್ಯವಿಲ್ಲವೇ' ಎಂದು ಹೇಳುವನು. ಸಂಪ್ರದಾಯವನ್ನು ತಿರಸ್ಕರಿಸಿ ಆಧುನಿಕತೆ ಸ್ವೀಕರಿಸಿದುದು ಸುಬ್ಬು ಮಾತ್ರವಲ್ಲ. ಸ್ವತಃ ಅನಂತು ತಂದೆಯ ಪರಂಪರೆ, ಹಳ್ಳಿಯ ಜೀವನ ಬಿಟ್ಟು ನಗರಕ್ಕೆ ತೆರಳಿದವನೇ ಆಗಿದ್ದನು. 'ತಾನು ಕೂಡ ಹೆತ್ತವರನ್ನು ಒದ್ದವನೇ, ತಾನು ಈ ಹಳ್ಳಿಯಲ್ಲಿ ಕೊಳೆಯಲೇಬೇಕಾಗಿ ಬಂದಿದ್ದರೆ ನಾನಾದರೂ ಏನಾಗಿರುತ್ತಿದ್ದೆನೋ, ನನ್ನ ಮನೆತನದ ನಡಾವಳಿಗಳನ್ನು ಅಪ್ಪನಿಗೆ ಎದುರಾಗಿ ಧಿಕ್ಕರಿಸಿದ್ದರಿಂದಲೇ ತಾನೇ ನಾನು ಬೆಳೆದು ಹೀಗಾಗಲು ಸಾಧ್ಯವಾಯಿತು' ಎಂದುಕೊಳ್ಳುತ್ತಾನೆ. ಈ ನಿದರ್ಶನದ ಮೂಲಕ ಪರಂಪರೆಯು ಕಾಲಕ್ಕೆ ತಕ್ಕಂತೆ ಪರಿವರ್ತನೆಗೊಳ್ಳುತ್ತದೆ. ಈ ಪರಂಪರೆಗೆ ತಕ್ಕಂತೆ ತಲೆಮಾರುಗಳ ವಿಭಿನ್ನ ವ್ಯಕ್ತಿತ್ವ, ಮನಸ್ಥಿತಿಗಳನ್ನು ಹೊಂದಿಸುವುದು ಸುಲಭದ ಮಾತಲ್ಲ. ಅಪ್ಪನಂತೆ ಮಗನಿರಲು ಸಾಧ್ಯವಿಲ್ಲ. ಅಪ್ಪನ ಪೀಳಿಗೆಯಿಂದ ಮಗನ ಪೀಳಿಗೆಗೆ ಕಾಲದಿಂದ ಕಾಲಕ್ಕೆ ಮನಸ್ಥಿತಿಗಳು ಬದಲಾಗುತ್ತವೆ. ಇದಕ್ಕೆ ತಂದೆಯೇ ಹೊಣೆಯಾಗಲಾರ. ಈ ಬದಲಾವಣೆಯು ತಂದೆ ತಾಯಿಗೆ ನೋವು ಉಂಟುಮಾಡಿದರೂ ಕಾಲದಿಂದ ಕಾಲಕ್ಕೆ ಬದಲಾವಣೆ ಅನಿವಾರ್ಯ ಮತ್ತು ಅಗತ್ಯವಾದುದು ಎಂಬುದು ವೇದ್ಯವಾಗುತ್ತದೆ.

ಅನಂತು ಮತ್ತು ಹಡೆವೆಂಕಟನದು ಎರಡು ವಿಭಿನ್ನ ಜೀವನಕ್ರಮ. ಬೌದ್ಧಿಕ ಜ್ಞಾನ ಮತ್ತು ಸ್ಥಳೀಯ ಜ್ಞಾನದ ಮುಖಾಮುಖಿಯೂ ಆಗಿದೆ. ಅನಂತು ವಿದೇಶಕ್ಕೆ ತೆರಳಿ ಶಿಕ್ಷಣ, ಉದ್ಯೋಗ ಆ ಮೂಲಕ ಬೌದ್ಧಿಕ ಜ್ಞಾನಿಯಾದ ಮನೋಭಾವ ಹೊಂದಿದ್ದ. ಹಡೆವೆಂಕಟನು ಹಳ್ಳಿಯಲ್ಲೇ ಇದ್ದರೂ ತನ್ನ ಅನುಭವದ ಮೂಲಕ ಎಷ್ಟೋ ವಿಚಾರಗಳಲ್ಲಿ ಅನಂತುವನ್ನು ಮೀರಿಸಿದ್ದ. ಅನಂತುವಿನಲ್ಲಿ ಮಾನವಪ್ರೀತಿಯನ್ನು ಹುಟ್ಟಿಸಿ ಎಣ್ಣೆ ಅಭ್ಯಂಜನದ ಮೂಲಕ ಆತನಿಗೆ ಅಂತರಂಗದ ಬೆಳಂದಿಂಗಳು ತೋರಿಸಿದ್ದನು. ಅನಂತುವಿನ ಬೌದ್ಧಿಕ ಪ್ರಶ್ನೆಗಳಿಗೆ ತನ್ನ ಹಳ್ಳಿನ ಜೀವನದ ಅನುಭವಗಳ ಮೂಲಕವೇ ಉತ್ತರಿಸುವುದು, ಅವನಲ್ಲಿನ ಜೀವನಪ್ರೀತಿ, ಇರುವುದರಲ್ಲಿಯೇ ತೃಪ್ತಿಪಡುವ ಬದುಕು ಅನಂತವನ್ನು ದಿಗ್ಭ್ರಮೆಗೊಳಿಸುತ್ತದೆ. ವಿದೇಶದ ಸುತ್ತಿದ ಅನುಭವ, ಪಡೆದುಕೊಂಡ ಜ್ಞಾನ ದೊಡ್ಡದು ಎಂಬ ಅಹಂಕಾರದಲ್ಲಿದ್ದ ಅನಂತುವಿಗೆ, ಅನುಪಯುಕ್ತ ಎಂದು ಭಾವಿಸಿದ ಇವನಲ್ಲಿಯೂ ತಾನು ಅರಿಯುವುದಿದೆ. ವೆಂಕಟನಿಗೂ ತನ್ನದೇ ಆದ ತತ್ವಜ್ಞಾನ ವ್ಯಕ್ತಿತ್ವವಿದೆ ಎಂಬುದನ್ನು ಅರಿತುಕೊಳ್ಳುವನು.

'ಸೂರ್ಯನ ಕುದುರೆ' ಹೇಗೆ ಕ್ಷಣಕ್ಷಣಕ್ಕೂ ಬದಲಾಗುತ್ತದೆಯೋ ಹಾಗೇ ಪೀಳಿಗೆಯಿದ ಪೀಳಿಗೆಗೆ ಬದಲಾವಣೆ ಕಂಡುಬರುತ್ತವೆ. ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯನ್ನು ಧನಾತ್ಮಕವಾಗಿ ಹೇಳುತ್ತಲೇ ಪರಂಪರೆಯೆಂಬುದು ಆಧುನಿಕತೆಯ ಕಾಲದಲ್ಲಿ ಹಾಸ್ಯಾಸ್ಪದವಾಗುವುದನ್ನು ಆಧುನಿಕತೆ ಹುಂಬತನದಿಂದ ಒಳಗಾದ ಯುವಜನತೆಯ ಅವಾಂತರಗಳನ್ನು ಈ ಕತೆಯೂ ಎಳೆ ಎಳೆಯಾಗಿ ಬಿಚ್ಚಿಡುತ್ತದೆ.

**ಪ್ರಕೃತಿ ಕಥೆಯಲ್ಲಿ ಪರಂಪರೆ ಮತ್ತು ಆಧುನಿಕತೆ:**

'ಪ್ರಕೃತಿ' ಕಥೆಯಲ್ಲಿ ಪ್ರಕೃತಿ ಅಂದರೆ ಕೇವಲ ನೈಸರ್ಗಿಕ ವಾತಾವರಣವಲ್ಲ, ಅದು ಮಾನವನ ಆಂತರಿಕ ಮೂಲ ಸ್ವಭಾವ, ಲೈಂಗಿಕತೆ, ಬಯಕೆ, ನೈತಿಕ ಬಾಂದವ್ಯಗಳ ಸಂಘರ್ಷದ ಪ್ರತೀಕ. ವ್ಯಕ್ತಿಯ ವೈಯುಕ್ತಿಕ ಭಾವನೆಗಳು ಮತ್ತು ಸಮಾಜದ ನೈತಿಕ ಮಿತಿಗಳ ನಡುವಿನ ಸಂಘರ್ಷವಾಗಿ ವ್ಯಕ್ತಗೊಂಡಿದೆ.

ಈ ಕಥೆಯಲ್ಲಿ ಸಂಕಪ್ಪಯ್ಯನದು ಇಚ್ಛಾಶಕ್ತಿಯ ಸಮರ್ಥ ಕೃಷಿಕನ ಪಾತ್ರ. ಕೃಷಿಯಲ್ಲಿ ಅಪಾರ ಆಸಕ್ತಿಯುಳ್ಳವ. ತನ್ನಂತೆ ಪತ್ನಿ ಮತ್ತು ಮಕ್ಕಳು ಕೃಷಿಯಲ್ಲಿ ಮುಂದುವರೆಯಬೇಕೆಂದು ಬಯಸುವವನು. ಆದರೆ ಮಗ ನಾರಾಯಣದ್ದು ಇದಕ್ಕೆ ವಿರುದ್ಧವಾದ ನಡೆ. ಕಿತ್ತಳೆ ತೋಟದಿಂದ ಲಾಭವಿಲ್ಲ. ಹಿಂದಿನ ಕಾಲದ ಕೃಷಿಜೀವನದಲ್ಲಿ ತೊಡಗಿ, ಮಲೆನಾಡಿನ ಹಳ್ಳಿಯ ನೀರಸವಾದ ಜೀವನ ನಡೆಸುವುದು ಅವನಿಗೆ ಇಷ್ಟವಿಲ್ಲ. ಅದರಿಂದ ಆಚೆ ಬಂದು ನಗರದ ಬದುಕಿಗೆ ತೆರೆದುಕೊಳ್ಳುವುದು. ನಗರದಲ್ಲಿ ಹೋಟೆಲ್ ಇಟ್ಟು ಸಂಸಾರದ ಜಂಜಡಗಳಿಂದ ಮುಕ್ತಿ ಹೊಂದಬೇಕೆನ್ನುವುದು ಅವನ ಹಂಬಲವಾಗಿತ್ತು. ಹೋಟೆಲ್ ಇಡುವುದರಿಂದ ಆರ್ಥಿಕ ಪ್ರಗತಿ ಹೊಂದಿ ನೆಮ್ಮದಿಯ ಜೀವನ ನಡೆಸಬಹುದು. ಇದಕ್ಕೆ ತಂದೆ ತಾಯಿಯೂ ಒಪ್ಪಿ ನಗರಕ್ಕೆ ಬರಬೇಕೆಂಬುದು ಮಗ ನಾರಾಯಣನ ಎಣಿಕೆ. ಈ ಬಗೆಯ ಎರಡು ವಿಭಿನ್ನ ಪಾತ್ರ ಚಿತ್ರಣವಿದೆ.

ಪರಂಪರೆಯ ಮತ್ತು ಆಧುನಿಕತೆಯ ಅನುಸಂಧಾನದೊಂದಿಗೆ 'ಸೂರ್ಯನ ಕುದುರೆ' ಕತೆಯಂತೆ ಈ ಕತೆಯಲ್ಲೂ ಎರಡು ತಲೆಮಾರುಗಳ ವಿಭಿನ್ನ ವ್ಯಕ್ತಿತ್ವ ಹಾಗೂ ಮನೋಸ್ಥಿತಿಗಳನ್ನು ಅನಂತಮೂರ್ತಿ ಅವರು ಮುಖಾಮುಖಿಯಾಗಿಸುತ್ತಾರೆ. ನವ್ಯ ಕತೆಗಳಲ್ಲೆವೂ ಬಹುತೇಕ ವ್ಯಕ್ತಿತ್ವ, ಮನೋಭಾವದ ಸುತ್ತಲೂ ಹೆಣೆದಿರುವಂತವುಗಳೇ ಆಗಿವೆ. ಅದು ಆ ಕಾಲಘಟ್ಟದ ಒತ್ತಡವೂ ಆಗಿತ್ತು. ಸಂಕಪ್ಪಯ್ಯನ ಕೃಷಿಯಲ್ಲಿನ ನಂಬಿಕೆ, ಅರ್ಥಹೀನ ಸಂಪ್ರದಾಯಬದ್ಧ ಆಚರಣೆ ಇವೆಲ್ಲಾ ಭೂತವನ್ನು ಪ್ರತಿನಿಧಿಸಿದರೆ ಇಂತಹ ಪರಂಪರೆಗೆ ವಿರುದ್ಧವಾಗಿ ಬದಲಾವಣೆಯನ್ನು ಮತ್ತು ಆಧುನಿಕ ಬದುಕನ್ನು ನಾರಾಯಣ ಪ್ರತಿನಿಧಿಸುವನು.

ಆಧುನಿಕ ಬದುಕನ್ನು ನಿರೀಕ್ಷಿಸುವ ನಾರಾಯಣನಿಗೆ ಕಿತ್ತಳೆತೋಟದಲ್ಲಿ ದುಡಿಯುವುದು ಬೇಕಿಲ್ಲ. ಅಪ್ಪನ ಪರಂಪರೆಯನ್ನು ಮುಂದುವರೆಸುವ ಇರಾದೆಯೂ ಇಲ್ಲ. ನಾರಾಯಣ ಪೇಟೆಯಲ್ಲಿ ಕಲಿತಿದ್ದರಿಂದ ಅಲ್ಪ ಸ್ವಲ್ಪ ಜ್ಞಾನವುಳ್ಳವನಾಗಿದ್ದನು. ತಂದೆ ಸಂಕಪ್ಪನು ದುಡಿದ ಕೃಷಿಭೂಮಿಯಲ್ಲಿ ತನಗೂ ಪಾಲಿದೆ. ಪಿತ್ರಾರ್ಜಿತ ಆಸ್ತಿ ನನಗೂ ತೆಗೆದುಕೊಳ್ಳಲು ಹಕ್ಕಿದೆ ಎಂದು ಹೇಳುತ್ತಿರುತ್ತಾನೆ. ಒಡಹುಟ್ಟಿದ ಲಕ್ಷ್ಮಿ ವಿಧವೆಯಾಗಿ ಅವಳ ಬದುಕು ಬರಡಾಗಿದ್ದರೂ ಅದನ್ನು ಸರಿಪಡಿಸುವ ಆ ನಿಟ್ಟಿನಲ್ಲಿ ಅವನಿಗೆ ಚಿಂತೆಯೂ ಇಲ್ಲ. ಇದಕ್ಕೆಲ್ಲಾ ತಂದೆಯ ಹಠವೇ ಕಾರಣ ಎಂಬುದು ಅವನ ಧೋರಣೆ. ಈ ನೆಪದಲ್ಲಿ ಜವಾಬ್ದಾರಿಗಳಿಂದ ನುಣುಚಿಕೊಳ್ಳಲು ಯತ್ನಿಸುವನು. ಈ ರೀತಿಯಾಗಿ ಮಗ ನಾರಾಯಣ ತಂದೆಯ ವಿರುದ್ಧ ಬಂಡೇಳುತ್ತಾನೆ.

ಸಂಕಪ್ಪಯ್ಯನ ಆಕ್ರಮಣಕಾರಿ ಸ್ವಭಾವದಿಂದ ಬೇಸತ್ತ ಹೆಂಡತಿಯು ಮಗನನ್ನು ಬೆಂಬಲಿಸುತ್ತಾಳೆ. ಅದೇ ರೀತಿ ಸೀತಮ್ಮನಿಗೂ ಸಂಸಾರ, ಮನೆ, ಕಿತ್ತಳೆ ತೋಟದಿಂದ ಅನುಭವಿಸಿದ ಕಷ್ಟದಿಂದಾಗಿ ಕೃಷಿ ಬಗ್ಗೆ ಪ್ರೀತಿ, ಆಸಕ್ತಿಯೂ ಉಳಿದಿರಲಿಲ್ಲ. "ನಿತ್ಯ ಒಂದೇ ಕಥೆ ಈ ಹಾಳು ಕೊಂಪೇಲಿ. ನನಗೂ ಹೆಣಗಿ ಹೆಣಗಿ ಸಾಕಾಯ್ತು ನಾಣಿ. ಇವತ್ತು ಈ ದನಾನ ಹುಲೀ ಹಿಡಿತು, ನಾಳೆ ಕುರ್ಕ ಹೊತ್ತುಕೊಂಡು ಹೋಯಿತು, ಒಂದೋ ಎರಡೋ ಕಾಡಾನೆಯೊಂದು ಸೇರಿಕೊಂಡಿದಿಯಂತೆ... ಅಷ್ಟು ಸಾಲದೆಂದರೆ ಕೊಳೆ ರೋಗ, ಆ ರೋಗ, ಈ ರೋಗ, ಮಲೇರಿಯಾಂತ ಮತ್ತೆ ಸಾವಿರ. ಕೈಗೆ ಮೂರು ಕಾಸು ಹತ್ತದ ಮೇಲೆ ಇಲ್ಲೇ ಯಾಕೆ ಸಾಯಬೇಕು ಹೇಳು"[೨]

---

[2] ಅನಂತಮೂರ್ತಿ ಯು. ಆರ್., ಅನಂತಮೂರ್ತಿ ಅವರ ಸಮಸ್ತ ಕಥೆಗಳು, ೨೦೧೫, ಪುಟ ಸಂಖ್ಯೆ ೯೪

ಮಗ ನಾರಾಯಣನಿಗೂ, ತಾಯಿ ಸೀತಾಗೂ ಸಹ ಸಂಕಪ್ಪಯ್ಯನಿಗೆ ಹಾಳು ಬಿದ್ದಿರುವ ಭೂಮಿಯಲ್ಲಿ ಬೆಳೆಯನ್ನು ಬೆಳೆಯುವುದು ಅಸಾಧ್ಯವೆನಿಸಿತ್ತು. ಕಾಡು ಪ್ರಾಣಿಗಳು ಸಹ ಅಲ್ಲಿನ ಬೆಳೆಯ ನಾಶಕ್ಕೆ ಕಾರಣವಾದವು. ಇದರಿಂದಾಗಿ ಸಂಕಪ್ಪಯ್ಯನಿಗೆ ಹೆಂಡತಿ, ಮಗ ನಾರಾಯಣ ಹಾಗೂ ಶಾನುಭೋಗರು ಕಿತ್ತಳೆ ಕೃಷಿ ಬೇಡವೆನ್ನವರು. ಯಾರು ಎಷ್ಟೆಲ್ಲಾ ಹೇಳಿದರು ಸಹ ಅವರ ಮಾತಿಗೆ ಕಿವಿ ಕೊಡದೇ ಸಂಕಪ್ಪಯ್ಯ **'ಕಿತ್ತಳೆ ತೋಟ ಮಾಡಿಯೇ ಸಿದ್ದ'** ಎಂಬ ಧೋರಣೆ ತಾಳುವನು. ಇಂತಹ ಸಂದರ್ಭದಲ್ಲಿ ಸಂಕಪ್ಪಯ್ಯನಿಗೆ ಶಾಂತ ಹಾಗೂ ಲಕ್ಷ್ಮಿ ಇಬ್ಬರು ಹೆಣ್ಣು ಮಕ್ಕಳು ತನ್ನ ತಂದೆಯನ್ನು ವಿರೋಧಿಸದೆ ಸಾಂಪ್ರದಾಯಿಕವಾಗಿ ಬಂದಂತಹ ಕೃಷಿಯನ್ನು ಬೆಂಬಲಿಸುವರು.

ಸಂಕಪ್ಪಯ್ಯನು ತನ್ನ ಹೆಂಡತಿಯು ತನಗೆ ವಿರುದ್ಧವಾಗಿ ಮಗನ ನಿರ್ಧಾರವನ್ನು ಬೆಂಬಲಿಸಿದಳು ಎನ್ನುವ ಸಲುವಾಗಿ ಇವಳು ಕಪ್ಪು, ಕುರೂಪಿಯಾದರೂ ಬೇರೆ ಹೆಣ್ಣನ್ನು ನಾನು ಮೋಹಿಸಲಿಲ್ಲ, ಬೇರೆ ಹೆಣ್ಣನ್ನು ತಾನು ಮದುವೆಯಾಗಲಿಲ್ಲ. ನನ್ನನ್ನೇ ಧಿಕ್ಕರಿಸುವಳಲ್ಲಾ ಎಂದು ತನ್ನಂತೆ ಹೆಂಡತಿಯೂ ತನ್ನ ಆದರ್ಶಗಳನ್ನೇ ಪಾಲಿಸಬೇಕು. ನಾನು ಹೊಂದಿದ್ದ ಕುಟುಂಬದ ನಿಷ್ಠೆ ಇವಳಿಗಿಲ್ಲದೆ ಹೋಯಿತು ಎಂದು ಯೋಚಿಸುವನು. ಸಂಕಪ್ಪಯ್ಯ ತನ್ನದೇ ಆದ ಆದರ್ಶಗಳನ್ನು ಪಾಲಿಸುತ್ತಾ, ಕುಟುಂಬದವರೆಲ್ಲರೂ ಅದನ್ನೇ ಪಾಲಿಸಬೇಕು ಎಂಬುವ ಧೋರಣೆಯವನು. ಮದುವೆಯಾದ ಆರು ತಿಂಗಳೊಳಗೆ ಮಗಳು ಲಕ್ಷ್ಮೀಯೂ ವಿಧವೆಯಾಗಿ ಮನೆಗೆ ಬರುತ್ತಾಳೆ. ಲಕ್ಷ್ಮೀಯ ಮದುವೆ ಕೂಡ ಸಂಕಪ್ಪಯ್ಯನ ಛಲದಿಂದಲೇ ನಡೆದಿತ್ತು. ನಿರೂಪಕರೇ ಹೇಳುವಂತೆ ಒಳ್ಳೆಯವಳೆಂದು ನಂಬಿದ್ದ ಮಗಳು ಆಳು ಕಿಟ್ಟನ ಸಂಗ ಬೆಳೆಸಿ ಅವನೊಂದಿಗೆ ಇದ್ದದ್ದು ಮಾತ್ರ ಅವರ ಇಚ್ಛಾಶಕ್ತಿ ಸಂಪೂರ್ಣವಾಗಿ ಕುಗ್ಗಲು ಕಾರಣವಾಗುತ್ತದೆ. ಮಗಳು ವಿಧವೆಯಾಗಿ ಹಿಂತಿರುಗಿದರೂ ಕೃಷಿಯನ್ನು, ತನ್ನ ಮಾತುಗಳನ್ನು ಬೆಂಬಲಿಸುವಳು ಎಂದುಕೊಂಡಿದ್ದ ಸಂಕಪ್ಪಯ್ಯನಿಗೆ ಮಗಳು ಲಕ್ಷ್ಮೀ ಕಿಟ್ಟನೊಂದಿಗೆ ದೈಹಿಕ ಸಂಬಂಧ ಬೆಳೆಸಿದುದು ತಪ್ಪೇನಿಸುತ್ತದೆ. ಆಕೆಗೂ ಲೈಂಗಿಕ ಅಭಿಲಾಷೆಗಳಿರುತ್ತವೆ ಎನ್ನುವುದನ್ನು ಯೋಚಿಸಿದ ಸಂಕಪ್ಪಯ್ಯನಿಗೆ ಮಗಳು ದ್ರೋಹ ಮಾಡಿದಳು ಎಂಬ ಹತಾಶೆ ಮೂಡುತ್ತದೆ.

ಈ ಕತೆಯಲ್ಲಿ ಸಂಕಪ್ಪಯ್ಯನು ಕೃಷಿ ತನ್ನ ಕುಟುಂಬದ ಪರಂಪರೆ ಎಂದು ಅವುಗಳನ್ನು ಬಿಡಲಾರದೇ ತೊಳಲಾಡುವರು. ಆದರೆ ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಹೊಂದಿಕೊಳ್ಳುವುದಾಗಲೀ ಮಕ್ಕಳ ಪತ್ನಿ, ಮಗನ ಒತ್ತಾಸೆಯೂ ಅರಿವೆಗೆ ಬರಲಿಲ್ಲ. ಮಗಳು ಕಿಟ್ಟನೊಂದಿಗೆ ಸಂಬಂಧ ಬೆಳೆಸಿದುದು ಅನೈತಿಕವೆನಿಸಿತೇ ಹೊರತು ತನ್ನ ಹಠದಿಂದಾದ ಆದ ಮದುವೆ ಮುರಿದುಬಿದ್ದು, ಮಗಳು ವಿಧವೆಯಾದಳಲ್ಲಾ ಎಂಬ ಕೊರಗು ಕಾಣಿಸುವುದಿಲ್ಲ. ಸಂಕಪ್ಪಯ್ಯನಿಗೆ ಹೆಂಡತಿ, ಮಗ, ನಗರಕ್ಕೆ ಹೋದುದು, ಲಕ್ಷ್ಮೀ ಮಾಡಿದ ಮೋಸ ಇವೆಲ್ಲವುಗಳಿಗಿಂತ ತಾನು ನಂಬಿದ್ದ ಕೃಷಿ ಬದುಕು, ಸುತ್ತಮುತ್ತಲಿನ ಪ್ರಕೃತಿಯೇ ಸಂಕಪ್ಪಯ್ಯನ ಇಚ್ಛಾಶಕ್ತಿಯನ್ನು ಕುಸಿಯುವಂತೆ ಮಾಡುತ್ತದೆ. ಇನ್ನೇನು ಬಾಳೆಗೊನೆ ಬಿಟ್ಟವೆಂಬ ಹೊತ್ತಿಗೆ ಕಾಡಾನೆ ತುಳಿದು ಹೋಗಿ ಅವನ ಮನೋಬಲ ಕುಸಿಯುವಂತೆ ಮಾಡುತ್ತದೆ. ತನ್ನ ಮಾತಿಗೆ ವಿರುದ್ಧವಾಡದೇ ಕೃಷಿಯನ್ನು ಬೆಂಬಲಿಸಿದ್ದ ಮಗಳು ಕಿಟ್ಟನೊಂದಿಗೆ ಸಂಬಂಧ ಬೆಳೆಸಿದುದು. ಅಬ್ಬರಿಯ ತಳದಲ್ಲಿ ಅವನ ಇಚ್ಛಾಶಕ್ತಿಯ ಸಂಕೇತವಾಗಿ ಕಾಣಿಸಿಕೊಂಡ ಹುಲಿಯನ್ನು ಯಾರೋ ಸಾಯಿಸಿದ ಸುದ್ದಿ. ಇವುಗಳು ಸಂಕಪ್ಪಯ್ಯನನ್ನು ಅನಿವಾರ್ಯವಾಗಿ ಸೋಲನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಇದರಿಂದ ಮನೆ ತೋಟ ಮಾರಿ, ಹೆಂಡತಿ ಮಕ್ಕಳನ್ನು ಅವರಿಚ್ಛೆಯಂತೆ ಶಿವಮೊಗ್ಗೆಗೆ ಕಳುಹಿಸುವನು. ಏಕಾಂಗಿಯಾಗುವುದರ ಮೂಲಕ ಸೋಲನ್ನು ಎದುರಿಸಲು ಸಿದ್ದನಾಗಿ ಧೃಢವಾದ ಸಂಕಲ್ಪಶಕ್ತಿ ಪ್ರದರ್ಶಿಸುವುದು ಕಾಣಬಹುದು. ಮುಂದೆ ಅದೇ ತೋಟ ಸಮೃದ್ಧಿಯ ಫಲ ಕೊಡುವ ಸುದ್ದಿ ಕೇಳಿ ಸಂಕಪ್ಪಯ್ಯನಿಗೆ ಆಘಾತ ಉಂಟಾಗುತ್ತದೆ. ತನ್ನ ಇಚ್ಛಾಶಕ್ತಿಯ ಸೋಲಿರಬಹುದೇ ಎಂದು ಆಲೋಚಿಸುವನು. ಪ್ರಕೃತಿಯ ಸಮೀಪತೆಯಿಂದ ಸಂಕಪ್ಪಯ್ಯನು ಆಂತರಿಕ ಶಾಂತಿ ಮತ್ತು ಸ್ವಾತಂತ್ರ್ಯವನ್ನು ಅನುಭವಿಸುತ್ತಾನೆ. ತನಗೆ ಇಷ್ಟವಾದ ಈ ಬದುಕು ಹೆಂಡತಿ, ಮಕ್ಕಳು ಅನುಸರಿಸಬೇಕು ಎಂಬ ಧೋರಣೆ ತಾಳುತ್ತಾನೆ. ಅದು ಸಾಧ್ಯವಾಗದಿದ್ದಾಗ ಒಪ್ಪಿಸಲು ಪ್ರಯತ್ನಿಸುತ್ತಾನೆ. ಸಂಕಪ್ಪಯ್ಯನ ಕನಸು, ಅವನ ಭ್ರಮೆಗಳು, ಸಮಾಜದ ಒತ್ತಡದಿಂದ ನಿರಾಸೆಯಾಗುವುದು ಇಲ್ಲಿ ತಿಳಿದುಬರುತ್ತದೆ.

ನವ್ಯದ ಪ್ರಮುಖ ಲಕ್ಷಣವಾದ ನಾನು, ನನ್ನದು, ಸ್ವಾರ್ಥಪರವಾದ ಒಮ್ಮುಖವಾದ ಹಿತಾಸಕ್ತಿ, ಇವುಗಳಂತೆಯೇ ಸಂಕಪ್ಪಯ್ಯನು ನಾನು, ನನ್ನದು, ನನ್ನ ಆದರ್ಶ, ನನ್ನ ಇಚ್ಛಾಶಕ್ತಿ, ತೋಟ, ಮಗಳು ಎಲ್ಲವೂ ನನ್ನಿಚ್ಛೆಯತೆ ಇರಬೇಕು ಎಂಬುದಾಗಿ ಹಂಬಲಿಸುವನು. ಮಗ ನಾರಾಯಣನದು ಇದಕ್ಕಿಂತ ಭಿನ್ನವೇನಿಲ್ಲ. ಅಪ್ಪನಿಗೆ ಕೃಷಿ ಬೇಕಿದ್ದರೆ ತನಗೆ ತನ್ನ ಹೋಟೆಲ್ ಉದ್ಯಮ ಮುಖ್ಯ ಎಂದು ಭಾವಿಸುವನು. ಸಂಕಪ್ಪಯ್ಯನ ಆಲೋಚನೆಗಳಿಗೂ, ಮಗ ನಾರಾಯಣನ ಮನಸ್ಥಿತಿಗೂ ವೈರುಧ್ಯಗಳಿವೆ. ತಂದೆ ಭೂತವನ್ನು ಪ್ರತಿನಿಧಿಸಿದರೆ, ಮಗ ಇಂತಹ ಪರಂಪರೆಗೆ ವಿರುದ್ಧವಾಗಿ ಬದಲಾವಣೆ ಹಾಗೂ ಆಧುನಿಕ ಬದುಕನ್ನು ಪ್ರತಿನಿಧಿಸುವನು. ಸಂಕಪ್ಪಯ್ಯ, ನಾರಾಯಣ, ಸೀತಮ್ಮ ಈ ಮೂವರ ಮನಸ್ಥಿತಿಗಳು ಕತೆಯ ಕೇಂದ್ರಬಿಂದುವಾಗಿ ಈ ವಿಭಿನ್ನ ಮನಸ್ಥಿತಿ, ವ್ಯಕ್ತಿತ್ವಗಳೇ ಅವರನ್ನು ಒಂದೊಂದು ದಿಕ್ಕಿನಡೆ ಕೊಂಡ್ಯೊಯುವುದು ಮನನವಾಗುತ್ತದೆ.

### 'ಸೂರ್ಯನ ಕುದುರೆ' ಮತ್ತು 'ಪ್ರಕೃತಿ' ಕತೆಯಲ್ಲಿ ಮನೋವೈಜ್ಞಾನಿಕತೆಯ ನೆಲೆಗಳು

ಸಿಗ್ಮಂಡ್ ಪ್ರಾಯ್ಡ್ ವ್ಯಕ್ತಿತ್ವ ಸಿದ್ದಾಂತಲ್ಲಿ 'ನಾನೇಕೆ ಅಪ್ಪನಂತೆ' ಈ ಸಿದ್ಧಾಂತ ಪ್ರತಿಪಾದಿಸಿದರೆ, ಈತನ ಶಿಷ್ಯ ಕಾರ್ಲ್ ಯೂಂಗ್ ಇದಕ್ಕೆ ಪ್ರತಿಯಾಗಿ 'ನಾನೇಕೆ ಅಪ್ಪನಂತಿಲ್ಲ' ಎಂಬ ಸಿದ್ಧಾಂತವನ್ನು ಪ್ರಸ್ತುತಪಡಿಸುತ್ತಾನೆ. ಪ್ರಾಯ್ಡ್ ಮತ್ತು ಯೂಂಗ್‍ನ ವ್ಯಕ್ತಿತ್ವ ಸಿದ್ದಾಂತದ ಅಂಶಗಳು ಸ್ಪಷ್ಟವಾಗಿ ಅನಂತಮೂರ್ತಿ ಅವರ ಈ ಎರಡು ಕತೆಯೊಳಗೆ ಎದುರಾಗುತ್ತವೆ. ಅಡಿಗರ 'ವರ್ಧಮಾನ' ಕವಿತೆಯಲ್ಲೂ ಪ್ರಾಯ್ಡ್ ಮತ್ತು ಯೂಂಗ್‍ನ ವ್ಯಕ್ತಿತ್ವ ಸಿದ್ಧಾಂತದ ಅಂಶಗಳು, ಪ್ರಾಯ್ಡ್‍ನ ಈಡಿಪಸ್ ಕಾಂಪ್ಲೆಕ್ಸ್ ಸಿದ್ಧಾಂತ ಕಾಣಿಸಿಕೊಳ್ಳುತ್ತದೆ. ಈ ಕವಿತೆಯಲ್ಲಿ ಅಪ್ಪ ಪರಂಪರೆಯನ್ನು ಪ್ರತಿನಿಧಿಸಿದವನು. ಹಿರಿಯರಂತೆ ತಾನು ಇದ್ದು, ಮಗನು ಅದೇ ಮಾದರಿ ಅನುಸರಿಸಬೇಕು ಎಂದು ಬಯಸುವನು. ತನ್ನ ಕಣ್ಣ ಮುಂದೆ ತನ್ನ ರಕ್ತ ಹಂಚಿಕೊಂಡು ಬೆಳೆದ ಮಗ ಏನೋ ಆಗಬೇಕಾದವನು ಇನ್ನೇನೋ ಆಗುತ್ತಿದ್ದಾನೆ. ಮುತ್ತಜ್ಜ ಕಟ್ಟಿದ ಮನೆಗೆ ದೀಪ ಹಚ್ಚುವರಿಲ್ಲ. ಸತ್ತ ಮಾತೃ, ಪಿತೃಗಳಿಗೆ ಶ್ರಾದ್ಧಾ ಮಾಡುವರಿಲ್ಲ ಎಂದು ದುಃಖಿಸುವನು. ಪರಂಪರೆಯ ಅಪ್ಪನಿಗೆ ವಿಮುಖವಾದ ಮನೋಭಾವ ಹೊಂದಿರುವ ನಾಣಿಯ ಮಗ ಶೀನಿಯು ಅಪ್ಪನ ಹೀಗಿರಬೇಕು, ಹೀಗೆ ನಡೆದುಕೊಳ್ಳಬೇಕು ಎಂಬ ಧೋರಣೆಯನ್ನು ಪ್ರತಿಭಟಿಸಿ ಸ್ವಾತಂತ್ರ್ಯ, ಸ್ವೇಚ್ಛಾಚಾರದ ಬದುಕನ್ನು ಆರಿಸಿಕೊಳ್ಳುವನು.

ಆಕಾಶ ಕೈಗೆ ಸಿಗುವುದಿಲ್ಲವೆಂದು ಕೋಪ, ಕಳೆದ ಬಾಲ್ಯಾವಸ್ಥೆ ಮತ್ತ ಬರಲಾರದೆದು ಕೋಪಗೊಳ್ಳುವುದಲ್ಲದೆ ತನಗಿಂತ

ಮೊದಲೇ ತನ್ನಪ್ಪ ಹುಟ್ಟಿದ್ದಕ್ಕೆ ಹಾಗೇ ತಂದೆಯೇ ತಾಯಿಯಿಂದ ದೂರಮಾಡಿದಕ್ಕೆ ತಂದೆಯೇ ತನಗೆ ಪ್ರತಿಸ್ಪರ್ಧಿ ಎಂದು ತಂದೆಯೊಂದಿಗೆ ಮುಯ್ಯಿ ತೀರಿಸಿಕೊಳ್ಳಲು ಯೋಚಿಸುವನು. ಪರಂಪರೆ ಪ್ರತಿನಿಧಿಸಿ ಪರಂಪರೆಯನ್ನು ಉಳಿಸಿಕೊಳ್ಳಬೇಕೆನ್ನುವ ಮುಖವಾಡ ನಾಣಿಯದ್ದಾದರೆ, ಆಧುನಿಕತೆಯನ್ನು ಬಯಸುವ ಹೊಸಜನಾಂಗದ ಮನೋಸ್ಥಿತಿಯ ಪ್ರತೀಕ ಆ ಬಗೆಯ ಮುಖವಾಡ ಶೀನಿಯದ್ದಾಗಿತ್ತು.

ಸಿಗ್ಮಂಡ್ ಫ್ರಾಯ್ಡ್‌ನ 'ನಾನೇಕೆ ಅಪ್ಪನಂತೆ' ಈ ಸಿದ್ಧಾಂತವನ್ನು 'ವರ್ಧಮಾನ' ಕವಿತೆಯ ನಾಣಿ 'ಸೂರ್ಯನ ಕುದುರೆ'ಯ ಹಡೆವೆಂಕಟ, 'ಪ್ರಕೃತಿ' ಕಥೆಯ ಸಂಕಪ್ಪಯ್ಯ ಈ ಪಾತ್ರಗಳು ಬಹುವಾಗಿ ಹೋಲುತ್ತದೆ. ಹಡೆವೆಂಕಟ ಅಪ್ಪನಂತೆಯೇ ಹಳ್ಳಿಯಲ್ಲೇ ಉಳಿದು ವಂಶಪರಂಪರೆಯಾಗಿ ಬಂದ ಜೋಯ್ತಿಸನ ವೃತ್ತಿ, ಪರೋಪಕಾರಿತನ, ಉಡಾಫೆ ಮನೋಭಾವ ಬೆಳೆಸಿಕೊಂಡು ತನ್ನೂರಿನಲ್ಲೇ ತನಗೆ ಬೆಲೆ ಇಲ್ಲದಿದ್ದರೂ ಅಲ್ಲೆ ಬದುಕು ಕಂಡುಕೊಳ್ಳುವನು. 'ಪ್ರಕೃತಿ' ಕಥೆಯಲ್ಲಿ ಸಂಕಪ್ಪಯ್ಯ ಸಂಪ್ರದಾಯವನ್ನು ಪ್ರತಿನಿಧಿಸಿದವನು. ವಂಶ ಪಾರಂಪರೆಯಿಂದ ಬಂದ ಕೃಷಿಯನ್ನ ಆಧರಿಸಿ ಜೀವನವನ್ನು ನಡೆಸುವುದು ಅವನ ಇಚ್ಛೆಯಾಗಿತ್ತು. ಮಗ ನಾರಾಯಣ, ಹೆಂಡತಿ ವಿರೋಧಿಸದರೂ ಕಿತ್ತಳೆ ಕೃಷಿಯನ್ನು ಮುಂದುವರಿಸಿಕೊಂಡು ಹೋಗುವ ಇಚ್ಛೆ ಅವನದಾಗಿತ್ತು.

ಯೂಂಗ್ ನ 'ನಾನೇಕೆ 'ಅಪ್ಪನಂತಿಲ್ಲ ಸಿದ್ಧಾಂತ ಹೋಲುವಂತೆ ವರ್ಧಮಾನ' ಕವಿತೆಯ ಶೀನಿ 'ಸೂರ್ಯನ ಕುದುರೆ'ಯ ಅನಂತು, ವೆಂಕಟನ ಮಗ ಸುಬ್ಬು, ಶೇಷಣ್ಣನ ಮಗ, 'ಪ್ರಕೃತಿ' ಕಥೆಯ ನಾರಾಯಣ ಈ ಪಾತ್ರಗಳನ್ನು ನೋಡಬಹುದು. 'ಸೂರ್ಯನ ಕುದುರೆ' ಕತೆಯಲ್ಲಿ ಅನಂತು ತನ್ನ ಕುಟುಂಬದ ವಂಶಪಾರಂಪರ್ಯ ವೃತ್ತಿಯನ್ನು ತ್ಯಜಿಸಿದವನು. ಅಲ್ಲದೆ ತಂದೆಯಂತೆ ಹಳ್ಳಿಯಲ್ಲಿ ಬೇಸಾಯ ಮಾಡದೇ, ಆಧುನಿಕ ಶಿಕ್ಷಣ, ಪ್ರೊಫೆಸರ್ ವೃತ್ತಿ ಎಂದುಕೊಂಡು ವಿದೇಶಗಳಲ್ಲಿದ್ದವನು. ಅನಂತರವೂ ಮೈಸೂರಿನ ನಗರದಲ್ಲೇ ನೆಲೆಸಿರುವವನು. ಈ ಬಗೆಯಲ್ಲಿ ಅಪ್ಪನಿಗಿಂತ ಭಿನ್ನನಾಗುವನು. ಇದೇ ಕತೆಯ ಶೇಷಣ್ಣನ ಮಗನೂ ಇದೇ ಹಿನ್ನಲೆಯವನು. ಮುದಿತಂದೆಯನ್ನು ನೋಡಿಕೊಳ್ಳದೇ ಬೊಂಬಾಯಿಯಲ್ಲಿ ನೆಲೆಸಿ ಸುಖದಿಂದಿರುವನು. ಇನ್ನು ವೆಂಕಟಜೊಯ್ತಿಸನ ಮಗ ಸುಬ್ಬುವಿನದೂ ಇದೇ ಕತೆಯಾಗಿದೆ. ಈತನಿಗೂ ತಂದೆಯ ಪೌರೋಹಿತ್ಯದ ಜಾಯಾಮಾನ ಒಪ್ಪಿಕೊಳ್ಳದೇ ಆಧುನೀಕತೆಗೆ ಮುಖಮಾಡಿ, ನಗರ ಜೀವನ ಬಯಸುವನು. ಅಪ್ಪನ ಸೌಮ್ಯ ವ್ಯಕ್ತಿತ್ವಕ್ಕೆ ವಿರುದ್ಧವಾಗಿ, ಕುಟುಂಬವನ್ನು ದ್ವೇಷಿಸುವ ಕ್ರೂರತನದ ವ್ಯಕ್ತಿತ್ವದೊಂದಿಗೆ ಕಳ್ಳನಾಗಿ, ದರೋಡೆಕೋರನಾಗಿ ಬದಲಾಗುವನು.

'ಪ್ರಕೃತಿ' ಕಥೆಯ ನಾರಾಯಣ ತಂದೆ ಸಂಕಪ್ಪಯ್ಯನನ್ನು ವಿರೋಧಿಸುವನು. ಆಧುನಿಕತೆಗೆ ಮಾರುಹೋಗಿ ವಂಶಪಾರಂಪರ್ಯವಾಗಿ ಬಂದಂತಹ ಕೃಷಿಯನ್ನು ನಿರಾಕರಿಸಿ ನಗರದಲ್ಲಿ ಹೋಟೆಲ್ ನಡೆಸಲು ಮುಂದಾಗುವನು. ಕೃಷಿ ಬದುಕು ಬೇಡವೇ ಬೇಡೆಂಬ ಧಿಮಾಕು ಸ್ವಭಾವ ಹೊಂದಿದ್ದನು. ತಂದೆ ಸಂಕಪ್ಪಯ್ಯನದು ಹಳ್ಳಿಯ ಶೈಲಿಯಾದರೆ ಅದಕ್ಕೆ ವೈರುಧ್ಯವೆಂಬಂತೆ ನಾರಾಯಣ ಮೇಲಕ್ಕೆ ಬಾಚಿದ ಕ್ರಾಪು, ಪೇಟೆಯ ಲಫಂಗನತೆ ತಲೆಗೆ ಸುತ್ತಿದ್ದ ಮಾಫ್ಲರ್ ಜೊತೆಗೆ ಆಧುನಿಕ ಎಂದು ತೋರಿಸಿಕೊಳ್ಳಲು ಜೇಬಲ್ಲಿ ನೋಟು ಬುಕ್ಕು, ಪೆನ್ನು ಇಟ್ಟುಕೊಂಡು ಸುತ್ತಾಡುತ್ತಿದ್ದ. ಇದಾಗಿಯೂ ವಾರಕ್ಕೊಮ್ಮೆ ಕೈಯಲ್ಲಿ ಬ್ಯಾಟರಿ ಹಿಡಿದು ಪೇಟೆಗೆ ಹೋಗಿ ಸಿನಿಮಾ ನೋಡುವ ಹವ್ಯಾಸ ನಾರಾಯಣದಾಗಿತ್ತು. ಈ ರೀತಿಯಾಗಿ ನಾರಾಯಣನು ಆಧುನಿಕತೆಯ ಒಣ ಶೋಕಿಗೆ ಈ ಪರಿವರ್ತನೆಗೆ ಹೊಂದಿ ಅಪ್ಪನಂತಿರಲು ಇಷ್ಟಪಡದಿರುವುದು ಗಮನಿಸಬಹುದು. ಆ ಮೂಲಕ ಯುವಸಮುದಾಯವು ವ್ಯಕ್ತಿತ್ವದಲ್ಲಿ, ಜೀವನಕ್ರಮದಲ್ಲಿ ಹಾಗೂ ಮನೋಭಾವದಲ್ಲಿ ಪರಂಪರೆಯನ್ನು ಪ್ರತಿನಿಧಿಸಲಾರರು ಎಂಬುದು ತಿಳಿದುಬರುತ್ತದೆ. ಯೂಂಗ್‌ನ ಸಿದ್ಧಾಂತವು ಇದನ್ನೇ ಪ್ರತಿಪಾದಿಸುತ್ತದೆ.

ಕಾರ್ಲ್ ಯೂಂಗ್ ಮನುಷ್ಯನ ವ್ಯಕ್ತಿತ್ವದೊಳಗಿನ ಛಾಯೆ, ಪರ್ಸೋನ ಈ ಕುರಿತು ಮನೋವೈಜ್ಞಾನಿಕ ಸಿದ್ಧಾಂತದಲ್ಲಿ ನಿರೂಪಿಸುವನು. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜ ನಿರ್ದೇಶಿಸಿದಂತೆ ಮುಖವಾಡ ಧರಿಸಬೇಕಾಗುವುದು. ಇಲ್ಲದಿದ್ದರೆ ಅವನ ನಡತೆ ಉದ್ಧಟವಾಗಿ ಇತರರಿಗೆ ನೋವನ್ನುಂಟು ಮಾಡುವುದು. ಈ ಕತೆಯಲ್ಲಿ ಅನಂತು ಪಾಶ್ಚಾತೀಕರಣಕ್ಕೊಳಗಾದ ಇಂಗ್ಲೀಷ್ ಶಿಕ್ಷಣ ಪಡೆದ ಸುಶಿಕ್ಷಿತನ ಸೋಗು ಹಾಕಿ, ಆಧುನಿಕತೆಯ ಮುಖವಾಡ ಧರಿಸುವನು. ಆದರೆ ವೆಂಕಟ ಐಹಿಕ ಬದುಕಿನಲ್ಲಿ ಸುಖವಿಲ್ಲದೇ ವೈಫಲ್ಯ ಅನುಭವಿಸುತ್ತಿರುವ ಹಳ್ಳಿಯ ಗಮಾರನ ಮುಖವಾಡ ಧರಿಸಿ ವೈಫಲ್ಯ, ಅವಮಾನಗಳಿಗೆ ಒಡ್ಡಿಕೊಳ್ಳುವನು. ಸಾಮಾಜಿಕ ವ್ಯವಹಾರಗಳಲ್ಲಿ ಮಾನವ ಧರಿಸುವ ಇಂತಹ ಮುಖವಾಡಗಳನ್ನೇ ಯೂಂಗ್ 'ಪರ್ಸೋನ' ಎಂದಿದ್ದಾನೆ.

ಯೂಂಗ್ ಮಾನವನ ಅನಾಗರೀಕ, ಅನೈತಿಕ, ಅನಿಯಂತ್ರಿತ ಸಮಾಜಘಾತುಕ ಆಸೆ, ಅಭಿಲಾಷೆಗಳಿಗೆ ಛಾಯೆ ಪ್ರೇರಣೆ ಎನ್ನುವನು. 'ಸೂರ್ಯನ ಕುದುರೆ'ಯ ಸುಬ್ಬುವಿಗೂ ಈ ಛಾಯೆಗೂ ಸಂಬಂಧವಿದ್ದಂತೆ ತೋರುತ್ತದೆ. ಈತನು ಸಮಾಜದೊಂದಿಗೆ ಹೊಂದಿಕೊಳ್ಳದೆ ಹಿರಿಯರು ಮಾತಾನಾಡಿಸಿದಾಗ 'ನಿಮ್ಮ ಕೆಲಸ ನೀವು ನೋಡಿಕೊಳ್ಳಿ' ಎಂಬ ಉದ್ಧಟತನದ ಮಾತು, ಮನೆಯವರು ಪ್ರೀತಿಯಿಂದ ಬೆಳೆಸಿದ ಪಾರಿಜಾತ ಮರ ಕಡಿದು ಹಾಕಿ ಅವರ ಮನಸ್ಸಿಗೆ ಆಘಾತ ಉಂಟುಮಾಡುವುದು. ಕಾಲೇಜಿನ ಪ್ರಿನ್ಸಿಪಾಲರನ್ನು ಹೊಡೆದು ಹಣ ದೋಚುವುದು. ತಾಯಿಯ ಆಭರಣ ಕಳ್ಳತನ ಮಾಡುವುದು. ಇದನ್ನು ಪ್ರಶ್ನಿಸಿದ ಹೆತ್ತವರನ್ನೇ ಕೊಲ್ಲಲು ಮುಂದಾಗುವಂತಹ ಪಾಶವೀಯ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವನು.

ವ್ಯಕ್ತಿಯ ಮನಸ್ಸಿನ ಆಂತರಿಕ ತೊಳಲಾಟಗಳು ಹರೆಯಕ್ಕೆ ಕಾಲಿಡುತ್ತಿರುವ ಯುವಕನಿಗೆ ಮನಸ್ಥಿತಿಗಳು ಇಲ್ಲಿ ವ್ಯಕ್ತವಾಗುತ್ತವೆ. ಸ್ವತಂತ್ರದ ಬದುಕು, ಆಧುನಿಕತೆಗೆ ತೆರೆದುಕೊಳ್ಳುವ ಆತನ ಹಂಬಲ, ಅವನ ಹರೆಯ ಅವನನ್ನು ಯಾವ ನಿಟ್ಟಿನಲ್ಲಿ ದುರಂತಕ್ಕೆ ಕೊಂಡೊಯ್ಯುತ್ತದೆ ಎಂಬುದರ ಪ್ರತೀಕವೇ ಸುಬ್ಬುವಿನ ಪಾತ್ರವಾಗಿದೆ.

**ಉಪಸಂಹಾರ**

ಅನಂತಮೂರ್ತಿಯವರು ತಮ್ಮ ಕಥೆ, ಕಾದಂಬರಿಗಳಲ್ಲಿ ಪಾತ್ರಗಳ ಆಂತರಿಕ ಮನೋಭಾವ, ಸಂಶಯ, ಆತಂಕಗಳ ಕುರಿತಾಗಿ ಆಳವಾಗಿ ವಿಶ್ಲೇಷಣೆ ಮಾಡುತ್ತಾರೆ. ಅನಂತಮೂರ್ತಿ ಅವರ ಕಥನದಲ್ಲಿ ಬರುವ ನಾಯಕರು, ಕಥಾನಾಯಕರು ಆಧುನಿಕತೆಯನ್ನು ಸ್ವೀಕರಿಸಲಾರರು. ಪರಂಪರೆಯನ್ನು ಬಿಡಲಾರದ ದ್ವಂದ್ವತೆಗೆ ಒಳಗಾದವರು. ಆದರ್ಶ ಮತ್ತು ವಾಸ್ತವತೆಯ ದ್ವಂದ್ವದಲ್ಲಿ, ತೊಳಲಾಟಗಳಲ್ಲಿ ಸಿಲುಕಿದವರಾಗಿ ಭಾಸವಾಗುತ್ತಾರೆ. ವಿಶೇಷವಾಗಿ ಲೇಖಕರು ತಮ್ಮ ಕಥನದಲ್ಲಿ ವ್ಯಕ್ತಿಯ ಅಂತರಂಗದ ಹೋರಾಟವನ್ನು ತಿಳಿಸಲು ಸಂಕೇತ ಮತ್ತು ರೂಪಕಗಳನ್ನು ಬಳಸುವರು. 'ಸೂರ್ಯನ ಕುದುರೆ' ಮತ್ತು 'ಪ್ರಕೃತಿ' ಎರಡು ಕತೆಗಳಲ್ಲಿಯೂ ಅನಂತು ಮತ್ತು

ಸಂಕಪ್ಪಯ್ಯ ಸಮಾಜ– ಸಂಪ್ರದಾಯ–ಸಾಮಾಜಿಕ ಕಟ್ಟುಪಾಡು ಮತ್ತು ವೈಯುಕ್ತಿಕ ನೈತಿಕತೆಗಳ ನಡುವಿನ ಹೋರಾಟವನ್ನು ಎದುರಿಸುವಂತಾಗುತ್ತದೆ. 'ಸೂರ್ಯನ ಕುದುರೆ' ಕತೆಯಲ್ಲಿ ಲೇಖಕರು ಅನಂತು ಪಾತ್ರದ ಮೂಲಕ ತಾವೊಂದು ಪಾತ್ರವಾಗಿ ಮೂಡಿಬಂದಂತೆ ಭಾಸವಾಗುತ್ತದೆ. ಅನಂತಮೂರ್ತಿ ಅವರು ವ್ಯಕ್ತಿಯ ಬದುಕಿನ ಮೂಲಭೂತ ಸಮಸ್ಯೆಗಳನ್ನು ಸುತ್ತಮುತ್ತಲಿನ ಪರಿಸರ ಮತ್ತು ಸಮಾಜದ ಮತ್ತು ಮನೋವೈಜ್ಞಾನಿಕತೆಯ ಹಿನ್ನಲೆಯಲ್ಲಿ ಪರಾಮರ್ಶಿಸುವರು. 'ಪ್ರಕೃತಿ' ಕಥೆಯಲ್ಲಿ ಮಾನವನ ಬಯಕೆ ಮತ್ತು ನೈತಿಕ ಮಿತಿಗಳ ಮಧ್ಯೆ ನಡೆಯುವ ಸಂಘರ್ಷವಿದೆ. ಪಾರಂಪರಿಕ ಕೃಷಿ ಜೀವನದ ಒಲವು ಸಂಕಪ್ಪಯ್ಯನಲ್ಲಿ ಇಚ್ಚಾಶಕ್ತಿಯನ್ನು ಬೆಳೆಸುತ್ತದೆ. ತನ್ನ ಪರಂಪರೆ, ಆದರ್ಶಗಳಿಗೆ ವಿರುದ್ದವಾದ ಹೆಂಡತಿ, ನಾರಾಯಣ ಮತ್ತು ಲಕ್ಷ್ಮೀಯ ವ್ಯಕ್ತಿತ್ವ, ಅವರ ವೈಯುಕ್ತಿಕ ಆಸೆ ಅಭಿಲಾಷೆಗಳಿಂದ ಸಂಕಪ್ಪಯ್ಯ ಒಳಮನಸ್ಸಿನ ಹೋರಾಟ ಎದುರಿಸುವಂತಾಗುತ್ತದೆ. ಈ ರೀತಿಯಾಗಿ ಎರಡೂ ಕಥೆಯಲ್ಲಿ ಅನಂತಮೂರ್ತಿ ಅವರು ವ್ಯಕ್ತಿಯ ಕನಸು– ಸಮಾಜದ ಒತ್ತಡಗಳ ನಡುವೆ ನಡೆಯುವ ಹೋರಾಟವನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಪ್ರಸ್ತುಪಡಿಸುತ್ತಾ ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿಯಾಗಿಸಿದ್ದಾರೆ.

**ಆಕರ ಗ್ರಂಥಗಳು**

1. ಅನಂತಮೂರ್ತಿ ಯು. ಆರ್., ಅನಂತಮೂರ್ತಿ ಅವರ ಸಮಸ್ತ ಕಥೆಗಳು, ೨೦೧೫, ಅಕ್ಷರ ಪ್ರಕಾಶನ, ಹೆಗ್ಗೋಡು.

**ಪರಾಮರ್ಶನ ಗ್ರಂಥಗಳು**

1. ಅಶೋಕ ಟಿ. ಪಿ., ಕಥನ ಪ್ರೀತಿ, ಅಕ್ಷರ ಪ್ರಕಾಶನ ಹೆಗ್ಗೋಡು. ೨೦೧೩
2. ಅಶೋಕ ಟಿ. ಪಿ., ಕಥನ ಭಾರತಿ, ಮಣಿಪಾಲ್ ಯೂನಿವರ್ಸಲ್ ಪ್ರೆಸ್. ೨೦೧೮
3. ಆಮೂರ ಜಿ. ಎಸ್., ಸಮಕಾಲೀನ ಕಥೆ, ಕಾದಂಬರಿ ಹೊಸಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು. ೧೯೮೬
4. ಆಮೂರ ಜಿ. ಎಸ್.. ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಶ್ರೀಹರಿ ಪ್ರಕಾಶನ ಧಾರವಾಡ, ೧೯೯೪
5. ಆಮೂರ ಜಿ. ಎಸ್.. ಕನ್ನಡ ಕಥನ ಸಾಹಿತ್ಯ: ಸಣ್ಣಕತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೫